ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ :– ನಾಲ್ಕೈದು ಜನ ಸತ್ತಿದ್ದಾರೆಂದು ವದಂತಿ ಇದೆ. ಮತ್ತು ಅಲ್ಲಿನ ಪರಿಸ್ಥಿತಿ ಚಿಂತಾಜನಕವಾಗಿದೆ ಎಂದು ಹೇಳಿದ್ದಾರೆ.

ಶ್ರೀ ಧರ್ಮಸಿಂಗ್ :– ಇಲ್ಲ, ಈಗಲೂ ನಾನು ಫೋನ್ ಮಾಡಿ ತಿಳಿದುಕೊಂಡಿದ್ದೇನೆ ಒಬ್ಬರೇ ಸತ್ತಿರುವುದು.

ಪ್ರಕಟಣೆ

ವಿಷಯ :– ಶಾಸನ ಸಭೆಯ ಮೊಗಸಾಲೆಯಲ್ಲಿ ಅನಿರ್ಬಂಧಿತ ಅವಕಾಶವನ್ನು ಕೊಟ್ಟಿರುವುದರಿಂದ ಸದಸ್ಯರಿಗೆ ಅನಾನುಕೂಲವಾಗಿರುವುದು.

ಅಧ್ಯಕ್ಷರು :– ಈಗ ಮಾನ್ಯ ಸದಸ್ಯರ ಅವಗಾಹನೆಗೆ ಒಂದು ವಿಷಯವನ್ನು ತರಲು ಇಚ್ಛಿಸುತ್ತೇನೆ. ನಮ್ಮ ಶಾಸನಸಭೆಯ ಮೊಗಸಾಲೆಗಳಲ್ಲಿ ಓಡಾಡಲು ಅನಿರ್ಬಂಧಿತ ಅವಕಾಶವನ್ನು ಕೊಟ್ಟಿರುವುದರಿಂದ ಅಥವಾ ತಡೆಯದೆ ಇರುವದರಿಂದ ಬಹಳ ಜನ ಸದಸ್ಯರಿಗೆ ಅನಾನುಕೂಲವಾಗಿದೆ; ಕೆಲವರಿಗೆ ಕುಳಿತುಕೊಳ್ಳಲೂ ಅಲ್ಲಿ ಸ್ಥಳ ಇರುವುದಿಲ್ಲ. ಕಾಫಿ ತರುವುದಕ್ಕೆ, ಸಮಾಲೋಚನೆಗೆ ಅವಕಾಶವಿರುವುದಿಲ್ಲವೆಂದು ಕೆಲವು ಶಾಸಕರು ನನ್ನ ಗಮನಕ್ಕೆ ತಂದಿದ್ದಾರೆ. ಆದಕ್ಕಾಗಿ ಮಾನ್ಯ ಸದಸ್ಯರಿಗೆ ನಾನು ತಿಳಿಸುವುದೇನೆಂದರೆ ಇವತ್ತಿನಿಂದ ನಾನು ಸಿಬ್ಬಂದಿಗೆ ಕಟ್ಟುನಿಟ್ಟಾದ ಆಜ್ಞೆಯನ್ನು ಕೊಟ್ಟು, ಶಾಸನಸಭಾಸದಸ್ಯರು, ಮಾಜಿ ಶಾಸನ ಸಭಾಸದಸ್ಯರು, ಸಂಸತ್ ಸದಸ್ಯರು, ಮಾಜಿ ಸಂಸತ್ ಸದಸ್ಯರು ಇವರನ್ನು ಹೊರತುಪಡಿಸಿ ಬೇರೆ ಯಾರನ್ನೂ ಮೊಗಸಾಲೆಗಳಿಗೆ ಬಿಡಬಾರದೆಂದು ಈಗಾಗಲೇ ನಿರ್ದೇಶನ ನೀಡಿದ್ದೇನೆ ಅವರು ಅದನ್ನು ಸರಿಯಾಗಿ ಪರಿಪಾಲನೆ ಮಾಡುತ್ತಾರೆ. ಮಾನ್ಯ ಸದಸ್ಯರು ಇದಕ್ಕೆ ಸಹಕರಿಸಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ. ಜೊತೆಗೆ ನಮ್ಮ ಆಫೀಸರ ಗ್ಯಾಲರಿಗೆ ಯಾರು ಬರಬಹುದೆಂದು ಈಗಾಗಲೇ ಮುಖ್ಯ ಕಾರ್ಯದರ್ಶಿಗಳು ನಿರ್ಣಯ ಮಾಡಿದ್ದಾರೆ. ಅದನ್ನೂ ಕೂಡ ಕರಾರುವಕ್ಕಾಗಿ ಪಾಲಿಸಬೇಕೆಂದು ಸೂಚಿಸಿದ್ದೇನೆ ಮತ್ತು ಅಧಿಕೃತ ಪತ್ರಿಕಾ ವರದಿಗಾರರಿಗೆ ಮಾತ್ರ ಮೊಗಸಾಲೆಗಳಲ್ಲಿ ಅವಕಾಶ ಕೊಡಬೇಕೆಂದು ನಿರ್ದೇಶನವನ್ನು ಸಹಾ ಕೊಟ್ಟಿದ್ದೇನೆ. ಇದಕ್ಕೆ ಎಲ್ಲರ ಸಹಕಾರವನ್ನು ಬಯಸುತ್ತೇನೆ.

ಶ್ರೀ ಡಿ. ಬಿ. ಚಂದ್ರೇಗೌಡ :– ತಮ್ಮಿಂದ ಒಂದು ನಿರ್ದೇಶನ ಬಯಸುತ್ತೇನೆ. ನನ್ನದೇ ಉದಾಹರಣೆ ತೆಗೆದುಕೊಂಡರೆ, ತಮಗೆ ಹೆಚ್ಚು ಮನವರಿಕೆಯಾಗಬಹುದು. ತಾವು ವಿಧಾನ ಸಭೆಯ ಅಧ್ಯಕ್ಷರಾಗಿ ಕುಳಿತ ಅಪರಾಧಕ್ಕಾಗಿಯೋ, ಕಾರಣಕ್ಕಾಗಿಯೋ ಗೊತ್ತಾಗುತ್ತಿಲ್ಲ. ಮೇಲ್ಮನೆಯ ಸದಸ್ಯರು ಕೆಳಮನೆಯ ಮಾಜಿ ಸದಸ್ಯರು ಅಥವಾ ಹಾಲಿ ಇರತಕ್ಕಂಥ ಸಂಸತ್ ಸದಸ್ಯರು ಇಲ್ಲಿಗೆ ಬಂದು ಕೂರುವುದಕ್ಕೆ ಅವಕಾಶವಿಲ್ಲ. ಈಗ ಅವರುಗಳು ಮೇಲೆ ಹೋಗಿ ಕೂರುವ ವ್ಯವಸ್ಥೆಯನ್ನು ಮಾಡಲಾಗಿದೆ. ಆದರೆ, ಮೇಲ್ಮನೆಯಲ್ಲಿ ಈಗಲೂ ವಿಧಾನಸಭಾ ಸದಸ್ಯರು ಹೋದರೆ ಅಲ್ಲಿ ಕೆಳಗಡೆ ಕೂರಲು ಒಂದು ಅವಕಾಶವಿದೆ. ಇಲ್ಲೂ ಅಂತಹ ಒಂದು ಅವಕಾಶ ಮಾಡಬೇಕು. ಅನೇಕ ಜನ ಹಿಂದೆ ಮಂತ್ರಿಯಾದವರಿದ್ದಾರೆ. ಅಧ್ಯಕ್ಷರಾದವರು ಮತ್ತು ಉಪಾಧ್ಯಕ್ಷರು ಇದ್ದಾರೆ. ಅವರಿಗೆ ಮೇಲೆ ಹೋಗಿ ಕೂರಲು ಮುಜುಗರವಾಗುತ್ತದೆ ಎಂಬುದನ್ನು ತಾವು ಅರ್ಥ ಮಾಡಿಕೊಳ್ಳ ಬಹುದು. ಆದ್ದರಿಂದ, ದಯವಿಟ್ಟು ಮೇಲ್ಮನೆಯಲ್ಲಿ ಏನು ವ್ಯವಸ್ಥೆ ಇದೆಯೋ ಅದೇ ರೀತಿ ಇಲ್ಲೂ ನಾಲ್ಕೈದು ಸೀಟನ್ನಾದರೂ ಇಂತಹವರು ಬಂದಾಗ ಕೂರಲು ಕೆಳಗಡೆಯೇ ವ್ಯವಸ್ಥೆ ಮಾಡಿಕೊಟ್ಟರೆ ಬಹಳ ಅನುಕೂಲ ವಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ :– ಲೋಕಸಭೆಯಲ್ಲಿರುವಂತೆ ಇಲ್ಲಿಯೂ ಸೆಂಟ್ರಲ್ ಹಾಲ್ ಮಾಡ-ಬೇಕೆಂಬ ಯೋಜನೆ ಇತ್ತು. ಇದು ತಮ್ಮ ಕಾಲದಲ್ಲಿ ಆದರೆ ಅನುಕೂಲವಾಗುತ್ತದೆ. ಅದು ಆದರೆ ನಾವು ಹೋಗಿ ಕುಳಿತು ಮಾತನಾಡಲು ಅವಕಾಶವಾಗುತ್ತದೆ.

ಅಧ್ಯಕ್ಷರು :– ಸೆಂಟ್ರಲ್ ಹಾಲ್ ಮಾಡಲು ತಾತ್ವಿಕವಾಗಿ ನಿರ್ಧಾರ ತೆಗೆದುಕೊಳ್ಳಲಾಗಿದೆ. ಅದಕ್ಕೆ ನಮ್ಮ ಸರ್ಕಾರಿ ಆರ್ಕಿಟೆಕ್ಟ್ ಅವರು ಸೂಕ್ತ ಪ್ಲಾನ್ ಮತ್ತು ಎಸ್ಟಿಮೇಟನ್ನು ಮಾಡುತ್ತಿದ್ದಾರೆ. ಅದರ ಬಗ್ಗೆ ಚುರುಕು ಮಾಡುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ.

ಶ್ರೀ ಡಿ. ಬಿ. ಚಂದ್ರೇಗೌಡ :– ನಾನು ಕೇಳಿದ್ದುದು ಏನೆಂದರೆ, ಇಲ್ಲಿನ ಕಾರ್ಯಕಲಾಪಗಳನ್ನು ನೋಡಲು ಅನೇಕ ಸಲ ಹೊರಗಡೆಯಿಂದ ಅನೇಕ ಜನ ಕೇಂದ್ರ ಸಚಿವರು ಬರುವುದುಂಟು. ಹಾಗೆಯೇ ಬೇರೆ ರಾಜ್ಯಗಳ ಮುಖ್ಯಮಂತ್ರಿಗಳು ಬರುವುದುಂಟು. ಆಗ ಅವರು ಈ ಸಭೆಯ ಮೇಲ್ಗಾಗದಲ್ಲಿ ಮೋಗಿ ಕೂರುವುದಕ್ಕೆ ಬದಲು ಇಲ್ಲಿಯೇ ಕೆಳಗಡೆ ಕೂರಲು ಅವಕಾಶ ಮಾಡಿಕೊಡಬೇಕು. ದಯವಿಟ್ಟು ತಾವು ಇದನ್ನು ಸ್ವಲ್ಪ ನೋಡಬೇಕು.

12--30 ಪಿ. ಎಂ.

ಶ್ರೀ ವಾಟಾಳ್ ನಾಗರಾಜ್ :– ಅಧ್ಯಕ್ಷರ ವೇದಿಕೆ ಅಗಲವಾಗಿರಬೇಕು. ಅದರ ಬಗ್ಗೆ ಬದಲಾವಣೆ ಆಗುವುದು ಬೇಡ.

ಅಧ್ಯಕ್ಷರು :– ಸೂಕ್ತಪಾದಂಥ ಸುಧಾರಣೆಗಳನ್ನು ಜಾರಿಗೆ ತರುವುದಕ್ಕೆ ಪ್ರಯತ್ನವನ್ನು ಮಾಡೋಣ.

ಶ್ರೀ ವಾಟಾಳ್ ನಾಗರಾಜ್ :– ನಮಗೆ ಜಿಲ್ಲಾಪರಿಷತ್ ಮತ್ತು ಮಂಡಲ್ ಪಂಚಾಯಿತಿ ತಿದ್ದುಪಡಿ (ವಿಧೇಯಕದ) ಕನ್ನಡ ಪ್ರತಿ ಬಂದಿದೆ. ಇದಕ್ಕೆ ಮಾನ್ಯ ಸರ್ಕಾರಕ್ಕೂ, ಮಾನ್ಯ ಸಚಿವರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಕನ್ನಡವೇ ಬೇಕು ಎಂದು ಹೇಳಿ ಒತ್ತಡ ಮಾಡಿ, ಒತ್ತಡ ಮಾಡಿ ಅದು ಮುದ್ರಣವಾಗಿ ಬಂದಿರುವುದಕ್ಕೋಸ್ಕರ ಅವರಿಗೆ ಅಧ್ಯಕ್ಷರ ಮೂಲಕ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಮತ್ತು ಅಧ್ಯಕ್ಷರಿಗೂ ಕೂಡಾ ಪ್ರೀತಿ ವಿಶ್ವಾಸದಿಂದ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಕನ್ನಡದ ಪ್ರತಿ ಬಂದಿದೆ. ಅದರ ಪದದ ಬಗ್ಗೆ ನಾನು ಪ್ರಶ್ನೆ ಮಾಡುವುದಕ್ಕೆ ಹೋಗುವುದಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ :– ಈಗ ಮಾನ್ಯ ಬಸವಲಿಂಗಪ್ಪನವರು ಸ್ವಲ್ಪ ಹೆಚ್ಚು ಕಡಿಮೆ ಮಾತನಾಡಿದರೂ ಅಡ್ಜಸ್ಟ್ ಮಾಡಿಕೊಳ್ಳುತ್ತಾರೆ.

ಶ್ರೀ ವಾಟಾಳ್ ನಾಗರಾಜ್ :– ಅದೇನೆ ಇರಲಿ, ಬಸವಲಿಂಗಪ್ಪನವರಿಗೂ ಮತ್ತು ಮಾನ್ಯ ಅಧ್ಯಕ್ಷರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಶ್ರೀ ಬಿ. ಎಂ. ಇದಿನಬ್ಬ :– ಮಾನ್ಯ ಅಧ್ಯಕ್ಷರು ನಮ್ಮ ಶಾಸಕರ ಭವನದ ಬಗ್ಗೆಯೂ ಸ್ವಲ್ಪ ಗಮನವನ್ನು ಪರಿಶೀಲಿಸಬೇಕು. ನಮಗೆ ಅಲ್ಲಿ ಒಂದು ವಾಹನಗಳು ಸರಿಯಾಗಿ ಸಿಕ್ಕುವುದಿಲ್ಲ. ಊಟ ತಿಂಡಿಗಳು ಕೂಡಾ ಸರಿಯಾಗಿ ಸಿಕ್ಕುವುದಿಲ್ಲ. ಅದರ ಕಡೆಗೂ ತಾವು ಗಮನವನ್ನು ಕೊಟ್ಟರೆ ನಮಗೂ ತುಂಬಾ ಉಪಕಾರವಾಗುತ್ತದೆ.

ಶಾಸನ ರಚನೆ ಕಾರ್ಯಕಲಾಪಗಳು

ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು.

1990 ನೇ ಇಸವಿಯ ಕರ್ನಾಟಕ ಜಿಲ್ಲಾ ಪರಿಷತ್ ತಾಲ್ಲೂಕ್ ಪಂಚಾಯತ್ ಸಮಿತಿಗಳು, ಮಂಡಲ್ ಪಂಚಾಯಿತಿ, ನ್ಯಾಯ ಪಂಚಾಯಿತಿ ಹಾಗೂ ಇತರ ಕೆಲವು ಕಾನೂನು (ತಿದ್ದುಪಡಿ) ವಿಧೇಯಕ.

† ಶ್ರೀ ಬಿ. ಬಸವಲಿಂಗಪ್ಪ :– ಮಾನ್ಯ ಅಧ್ಯಕ್ಷರೇ, ನಾನು ನಿನ್ನೆ ಎಲ್ಲಿಂದ ವಿಶ್ಲೇಷಣೆ ಮಾಡುತ್ತಿದ್ದೆ, ಈಗ ಅಲ್ಲಿಂದ ಪ್ರಾರಂಭ ಮಾಡುತ್ತೇನೆ. ನಿನ್ನೆ ಹೇಳುವಾಗ ನಮ್ಮ ಸಮಾಜದಲ್ಲಿರತಕ್ಕಂಥ ಒಂದು ನೀಲಿ ನಕ್ಷೆಯ ಹಿನ್ನೆಲೆಯಲ್ಲಿ ನಾವು ಯಾವ ಕಾರ್ಯವನ್ನೇ ಆಗಲಿ ಮಾಡಲಿಕ್ಕೆ ಪ್ರಯತ್ನವನ್ನು ಮಾಡಬೇಕು. ನಮ್ಮ ಸಮಾಜದಲ್ಲಿ ನೀಲಿ ನಕ್ಷೆ ಹೇಗೆ ಇದೆ ಅಂದರೆ ಇದರಲ್ಲಿ ಎಲ್ಲಾ ಜಾತಿಗಳು ಇವೆ, ಧರ್ಮಗಳೂ ಇವೆ, ಮತ್ತೆ ಪಂಗಡ ಪಂಗಡಗಳು ಇವೆ. ಅದೇ ರೀತಿಯಾಗಿ ನಾವುಗಳು ಮಾಡಿಕೊಂಡು ಬಂದಿದ್ದೇವೆ. ಅದಕ್ಕನುಗುಣವಾಗಿ ನಾವು ಇವತ್ತಲ್ಲ ನಾಳೆ, ನಾಳೆಯಲ್ಲಾ ನಾಡಿದ್ದು, ಇದಕ್ಕೆ ಪರಿಹಾರವನ್ನು ಕಂಡು ಹಿಡಿದು ಈ ಪ್ರಜಾಪ್ರಭುತ್ವದಲ್ಲಿ ನಾವು ಎಲ್ಲರೂ ಸಮಾನರು ಎಂದು ಹೇಳಿ ಒಂದು ವಾದದ ಆಡಿಯಮೇಲೆ ಏನು ಈ ಪ್ರಜಾಪ್ರಭುತ್ವವನ್ನು ನಡೆಸಿಕೊಂಡು ಬರುತ್ತಿದ್ದೇವೆ. ಅದಕ್ಕೆ ಇದು ಪ್ರಯೋಜನವಾಗಲಿ ಎಂದು ಹೇಳಿ ನನ್ನದಾದರೂ ಒತ್ತಾಸೆ. ಕೆಲವರು ಜಾತಿಗಳು ಇಲ್ಲ ಏನು ಬೂಟಾಟಿಕೆಯ ಮಾತನಾಡುತ್ತಾರೆ. ಜಾತಿಗಳು ಇಲ್ಲ ಎಂದು ಹೇಳುತ್ತಾರೆ. ಜಾತಿಗಳನ್ನು ನಮ್ಮ ಜನ ಜೀವನದಲ್ಲಿ ಅಡಕ ಮಾಡಿಕೊಂಡಿದ್ದೇವೆ————————ಇದರ ಬಗ್ಗೆ ಒಂದು ವಿಷಯ ಜ್ಞಾಪಕಕ್ಕೆ ಬರುತ್ತದೆ. ಶ್ರೀಮಾನ್ ದಾತಾರ್‌ರವರು ಕೇಂದ್ರದಲ್ಲಿ ಹೋಂ ಮಿನಿಸ್ಟರ್ ಆಗಿದ್ದರು. ನಾವು ಅವರನ್ನು ಕ್ಯಾಬಿನೆಟ್ ಮೀಟಿಂಗ್ ಆಗುವಾಗ ಶ್ರೀಮಾನ್ ಜತ್ತಿಯವರು ಇದ್ದಾಗ ಅವರನ್ನು ಕರೆಯಿಸಿದ್ದೆವು. ನಾನೂ ಒಬ್ಬ ಸದಸ್ಯನಾಗಿದ್ದೆ. ಅಲ್ಲಿ ಅವರು ಒಂದು ಮಾತನ್ನು ಹೇಳಿದ್ದರು. You must practice caste inside but yon should not exhibit outside. ಎನ್ನುವ ಒಂದು ಮಾತನ್ನು ಹೇಳಿದ್ದರು. ಇದರ ಅರ್ಥ ಏನೆಂದರೆ ಜಾತಿಗಳು ಬೇಕೆಬೇಕು, ವ್ಯವಹಾರಕ್ಕೂ ಬೇಕು, ನಡೆಗೂ ಬೇಕು, ನುಡಿಗೂ ಬೇಕು, ಎಲ್ಲಾ ಸಂಪರ್ಕಕ್ಕೂ ಬೇಕು. ಆದರೆ ನಾವು ಪ್ರಜಾಪ್ರಭುತ್ವವನ್ನು ಈ ದೇಶದಲ್ಲಿ ಏನು ಅಳವಡಿಸಿಕೊಂಡಿದ್ದೇವೆ; ಅದರ ಪ್ರಕಾರ ನಾವೆಲ್ಲಾ ಸೇರಿ ಸಮಾನರಾಗಿರತಕ್ಕಂಥ ಮನುಷ್ಯರನ್ನು ನಾವು ಸೃಷ್ಟಿ